## ಕಥೆ

ಹುಸಿನಗುತ್ತಾ. ಸ್ಮಿತಾ ಶರ್ವಾಣಿ ಅವನ ಮಾತುಗಳಿಂದ ಕ್ಷಣ ವಿಚಲಿತಳಾದರೂ ತಕ್ಷಣ 'ಓ ಮೈ ಗಾಡ್, ಓ ಮೈ ಗಾಡ್ ಎಂಥಾ ತಮಾಷೆಯ ಉತ್ತರವನ್ನು ಕೊಟ್ಟಿರಿ' ಎಂದು ಮುಖದ ತುಂಬಾ ಮುಗುಳುನಗೆಯನ್ನು ತುಂಬಿ ಕೊಂಡಳು. ಅಲ್ಲದೆ ಅವನ ಉತ್ತರ ಅವಳಲ್ಲಿ ಒಂದು ಬಗೆಯ ಘಮ್ಮನೆಯ ಕುತೂಹಲವನ್ನು ಹುಟ್ಟಿಸಿತು. ಅವನು ಆಕೆಯ ನಗುವನ್ನು ಕಣ್ಣುಗಳಿಗೆ, ಹೃದಯಕ್ಕೆ ತುಂಬಿಕೊಳ್ಳುತ್ತಾ, 'ನಾನೇನು ತಮಾಷೆ ಮಾಡುತ್ತಿಲ್ಲ. ಐಯಾಮ್ ರಿಯಲಿ ಸೀರಿಯಸ್ ವ್ಹಾಟ್ ಐ ಮೀನ್' ಎಂದ.

ಆಕೆ ತನ್ನ ಬಂಗಾರ ಬಣ್ಣದ ಕೆನ್ನೆಯ ಮೇಲೆ ನೀಳವಾದ ಬೆರಳನ್ನೂರಿಕೊಂಡು ಸ್ವಲ್ಪವೇ ಅವನ ಕಡೆ ವಾರೆನೋಟ ಬೀರುತ್ತಾ 'ಹೌ ಈಸ್ ಇಟ್' ಎಂದು ಕಾಡಿಗೆ ಅಂಟದ ಕಣ್ಣು ರೆಪ್ಪೆಗಳನ್ನು ಮಿಟುಕಿಸಿದ್ದಳು. ಗಗನಸಖಿಯೊಬ್ಬಳಿಗೆ ನಗುವೇ ಆಭರಣ. ನೋವಿದ್ದರೂ ಅದನ್ನು ಮರೆಮಾಚಿ ನಗಬೇಕೆಂಬುದು ಗಗನದ ಕಾನೂನು ಇರಬಹುದು, ಚುಕ್ಕಿಚಂದ್ರಮರ ಅನುದಿನದ ನಿರಂತರ ನಗುವಿನಂತೆ. 'ನನಗೆ ನ್ಯೂಟನ್ಸ್ ಲಾ ಆಫ್ ಗ್ರ್ಯಾವಿಟೇಶನ್ ಮೇಲೆ ನಂಬಿಕೆ ಇದೆ. ಎಂದಾದರೊಂದು ದಿನ ವಿಮಾನ ಭೂಮಿಗೆ ಅಪ್ಪಳಿಸಿ ಛಿದ್ರವಾದಾಗ, ಅದರೊಂದಿಗೆ ನನ್ನ ದೇಹವೂ ಸುಟ್ಟು ಬೂದಿಯಾಗಬಹುದೆಂಬ ವಿಶ್ವಾಸ ನನ್ನದು' ಅವನು ವಿಮಾನದ ಕಿಟಕಿಯಿಂದ ಹೊರಕ್ಕೆ ಕಣ್ಣು ನೆಟ್ಟು ಹೇಳಿದ್ದ. ಗಗನ ಸಖಿಯರು ಚೆಲುವಿನ ಜೊತೆಗೆ ಬುದ್ಧಿವಂತೆಯರೂ ಆಗಿರುತ್ತಾರೆ! 'ಆಹಾ, ಭೂಮಿಯ ಗುರುತ್ವಾಕರ್ಷಣಾ ನಿಯಮದ ಬಗ್ಗೆ ಮಾತನಾಡ್ತಿದ್ದಿರಾ ನೀವು? ಮೈ ಡಿಯರ್ ಪೂರ್ ಬಿಸಿನೆಸ್ ಮ್ಯಾನ್, ಸೈನ್ಸ್ ಬಗ್ಗೆ ನಿಮ್ಮ ನಾಲೆಡ್ಜ್ ಕೂಡಾ ತುಂಬಾನೇ ಪೂರ್ ಆಗಿರುವುದು ಪ್ರೂವ್ ಆಯ್ತು ನೋಡಿ. ಲಿಫ್ಟ್, ಒತ್ತಡ ಮತ್ತು ತೂಕ ಈ ಮೂರೂ ಅಂಶಗಳು ಸಮತೋಲನದಲ್ಲಿ ಇರುವಂತೆ ವಿಮಾನವನ್ನು ರಚಿಸಲಾಗಿದೆ. ವಿಮಾನದ ತೂಕವನ್ನು ವಿರೋಧಿಸುವ ಮತ್ತು ವಿಮಾನವನ್ನು ಗಾಳಿಯಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಈ ಲಿಫ್ಟ್ ಹೊಂದಿದೆ. ಲಿಫ್ಟ್ ಮೇಲ್ಮುಖ ಬಲವನ್ನು ಉತ್ಪಾದಿಸಿ ವಿಮಾನವನ್ನು ಆಕಾಶದಲ್ಲಿ ಇರುವಂತೆ ಮಾಡುತ್ತದೆ. ವಿಮಾನ ಮುಂದೆ ಸಾಗಲು ಮತ್ತು ಎಳೆತವನ್ನು ನಿವಾರಿಸಲು ವಿಮಾನಕ್ಕೆ ಬೇಕಾಗುವ ಒತ್ತಡವನ್ನು ವಿಮಾನದಲ್ಲಿನ ಎಂಜಿನ್ನುಗಳು ಉತ್ಪಾದಿಸುತ್ತವೆ. ಎಂಜಿನ್ನುಗಳು ಇಂಧನವನ್ನು ಶಕ್ತಿಯನ್ನಾಗಿ ಪರಿವರ್ತಿಸುತ್ತವೆ. ಇದು ವಿಮಾನವನ್ನು ಮುಂದಕ್ಕೆ ಚಲಿಸುವಂತೆ ಮಾಡುತ್ತದೆ. ವಿಮಾನವು ತನ್ನ ಎತ್ತರವನ್ನು ಕಾಯ್ದುಕೊಳ್ಳಲು ಲಿಫ್ಟ್ ಫೋರ್ಸಿಗಿಂತ ಭಾರವಾಗಿರಬೇಕು. ವಿಮಾನದ ತೂಕವು ತನ್ನ ತೂಕದೊಂದಿಗೆ ಇಂಧನ, ಸರಕು ಮತ್ತು ಪ್ರಯಾಣಿಕರ ತೂಕವನ್ನು ಒಳಗೊಂಡಿರುತ್ತದೆ. ಟು ಸಮಪ್, ವಿಮಾನವು centrifugal force ಅನ್ನು ಹೊಂದಿದೆ. ಲೋಹದ ಹಕ್ಕಿಯ ಬಗ್ಗೆ ಹೇಳುವುದಿನ್ನೂ ಬಹಳಷ್ಟಿದೆ. ಆದ್ದರಿಂದಲೇ ನಾವು ಪ್ರತಿನಿತ್ಯ ಈ ಲೋಹದ ಹಕ್ಕಿಯ ಮಡಿಲಲ್ಲಿ ಯಾವ ಭಯವೂ ಇಲ್ಲದೆ ಬದುಕನ್ನು ಸವೆಸುತ್ತೇವೆ. ವಾಹನ ಅಥವಾ ರೈಲು ಚಲಿಸಲು ಮನುಷ್ಯ ರಸ್ತೆ ಮತ್ತು ಹಳಿಗಳನ್ನು ನಿರ್ಮಿಸುತ್ತಾನೆ. ಆದರೆ ವಿಮಾನಕ್ಕೆ ಅಂಥ ನಿರ್ಮಿಸಿದ ಯಾವ ನಿರ್ದಿಷ್ಟ ಮಾರ್ಗವೂ ಇಲ್ಲ. ಗಾಳಿಯೇ ಅದಕ್ಕೆ ಆಧಾರ. ಗಾಳಿ ಪ್ರಾಣವಾಯು' ಎಂದಳು.

ಮುಂದುವರಿಸಿ, 'ಅಂದ ಹಾಗೆ ನೀವು ಏನನ್ನು ವ್ಯಾಸಂಗ ಮಾಡಿದ್ದೀರಿ. ಗಗನಯಾತ್ರಿ ಸುನೀತಾ ವಿಲಿಯಮ್ಸ್ ಒಂಬತ್ತು ತಿಂಗಳು ಬಾಹ್ಯಾಕಾಶದಲ್ಲಿ ಇದ್ದು ಸೇಫಾಗಿ ಭೂಮಿಗೆ ಹಿಂತಿರುಗಿರುವ ಈ ಸಮಯದಲ್ಲಿ ಇಂಥ ತಮಾಷೆಯ ಮಾತುಗಳನ್ನಾಡುತ್ತಿರುವಿರಲ್ಲ...' ಅವಳ ಮಾತುಗಳನ್ನು ಮುಂದೆ ಕೇಳಲು ಸಾಧ್ಯವೇ ಇಲ್ಲವೇನೋ ಎನ್ನುವಂತೆ ಅವನು ಅವಳ ಕೈ ಅಮುಕುತ್ತಾ 'ಐಯಾಮ್ ವೆರಿ ಸಾರಿ ಸ್ಮಿತಾ ಶರ್ವಾಣಿ, ಸುಮ್ಮನೆ ತಮಾಷೆಗೆ ಹೇಳಿದ್ದು. ನನಗೆ ಬೆಂಗಳೂರಿನಲ್ಲಿ ವಿಮಾನ ಬಿಡಿ ಭಾಗಗಳನ್ನು ತಯಾರಿಸುವ ಬಹುದೊಡ್ಡ ಫ್ಯಾಕ್ಟರಿಯಿದೆ. ನನ್ನ ತಮ್ಮ ಅದನ್ನು ನೋಡಿಕೊಳ್ಳುತ್ತಾನೆ. ನಾನು ಎಂ.ಕಾಂ ಜೊತೆಗೆ ಬಿಸಿನೆಸ್ ಮ್ಯಾನೇಜ್ಮೆಂಟ್ ಮಾಡಿದ್ದೇನೆ, ಅದೂ ಇಂಡಿಯಾದ ನಂಬರ್ ಒನ್ ಬನಾರಸ್ ಯೂನಿವರ್ಸಿಟಿಯಲ್ಲಿ' ಎಂದಿದ್ದ. 'ಜಸ್ಟ್ ಕಾಲ್ ಮಿ ಸ್ಮಿತಾ. ಸಾವನ್ನು ಪರೋಕ್ಷವಾಗಿ ಧ್ಯಾನಿಸುತ್ತಿರುವಿರೆಂದರೆ ನೀವು ಮಾನಸಿಕವಾಗಿ ಅಥವಾ ದೈಹಿಕವಾಗಿ ಡಿಸ್ಟರ್ಬ್ ಆಗಿರುವಿರೆಂದೇ ನನ್ನ ಬಲವಾದ ಅನ್ನಿಸಿಕೆ. ಅಲ್ಲದೆ ಅಧ್ಯಾತ್ಮದ ತವರು ಎನಿಸಿದ ಬನಾರಸಿನಲ್ಲಿ ವ್ಯಾಸಂಗ ಮಾಡಿರುವುದರಿಂದ ಗಂಗೆ ಮತ್ತು ವಿರೂಪಾಕ್ಷನ